ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1603/2018

ಚಾಸಾಃ 1 ಫ್ರಾಸಾಃ1

ದಿನಾಂಕಃ 06-09-2022

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶರಿನ್ ಹೆಗ್ಡೆ |
| ತಂದೆಯ ಹೆಸರು | : | ಉಮೇಶ್ ಹೆಗ್ಡೆ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಅಂಕದ ಕಟ್ಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಮ್ಮ ಮನೆ ಅಂಕದಕಟ್ಟೆಯಲ್ಲಿರುತ್ತದೆ. ದಿಃ 22-11-2017 ರಂದು ನಾನು ಬಾಗಲಕೋಟೆಗೆ ಹೋಗಿದ್ದು, ನನ್ನ ಬಳಿ ಸ್ವಿಫ್ಟ್ ಡಿಜಾಯರ್ ಕಾರು ಇದ್ದು, ಸದ್ರಿ ಕಾರನ್ನು ಘಟನೆಯಾಗುವ 3 ತಿಂಗಳ ಹಿಂದೆ ನನ್ನ ಸಂಬಂಧಿಕರಾದ ಶೀನ ಶೆಟ್ಟಿರವರಿಂದ ಖರೀದಿಸಿದ್ದೆ. ದಾಖಲೆಗಳನ್ನು ನನ್ನ ಹೆಸರಿಗೆ ಬದಲಾಯಿಸಲು ಕೊಟ್ಟಿದ್ದೆ ಇನ್ನೂ ನನ್ನ ಹೆಸರಿಗೆ ಬದಲಾಗಿರಲಿಲ್ಲ. ನಾನು ಬಾಗಲಕೋಟೆಗೆ ಹೋದಾಗ ನಮ್ಮ ಕಾರು ನಮ್ಮ ಮನೆಯಲ್ಲಿಯೇ ಇತ್ತು. ನಾನು ಬಾಗಲಕೋಟೆಗೆ ಹೋಗಿದ್ದಾಗ ನನ್ನ ಹೆಂಡತಿ ನಾನು ಬರುವಾಗ ಲೇಟಾಗುತ್ತದೆ ಎಂದು ನನ್ನ ಅಜ್ಜನ ಮನೆಗೆ ಹೋಗಿದ್ದರು. ಆ ದಿನ ರಾತ್ರಿ ನಮ್ಮ ಮನೆಯಲ್ಲಿ ಯಾರೂ ಇರಲಿಲ್ಲ.

ದಿಃ 23-11-2017 ರಂದು ಬೆಳಿಗ್ಗೆ 5-30ಕ್ಕೆ ನಾನು ವಾಪಸ್ಸು ಬಂದಿರುತ್ತೇನೆ. ನಾನು ಬಂದು ನೋಡಿದಾಗ ಗೇಟು ತೆರೆದಿತ್ತು, ಕಾರು ಇರಲಿಲ್ಲ. ಮನೆಯ ಹಿಂದಿನ ಬಾಗಿಲು ಓಪನ್ ಆಗಿತ್ತು. ಮನೆಯ ಒಳಗಡೆ ಗೋದ್ರೆಜ್ ಚೆಲ್ಲಾಪಿಲ್ಲೆಯಾಗಿತ್ತು. ನನ್ನ ಕಾರಿನ ನಂಬರ್ ಕೆಎ-20-ಜಡ್-2248 ಆಗಿತ್ತು. ನಾನು ಮನೆಯಲ್ಲಿ ಇಟ್ಟು ಹೋಗಿದ್ದ ಕಾರಿನ ಕೀಯನ್ನು ತೆಗೆದುಕೊಂಡು ಕಾರನ್ನು ಕಳುವು ಮಾಡಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಸದ್ರಿ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿದ್ದು,

ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದು, ನಾನು ಸ್ಥಳವನ್ನು ತೋರಿಸಿಕೊಟ್ಟಿದ್ದು, ಸಂಜೆ 4 ಗಂಟೆ ಸಮಯದಲ್ಲಿ ಮಹಜರು ಮಾಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸದ್ರಿ ದಾಖಲೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ 25-12-2017 ರಂದು ನನ್ನ ಕಳುವು ಆದ ಕಾರು ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಿಕ್ಕಿರುತ್ತದೆ. ಸದ್ರಿ ಪೊಲೀಸ್ ಠಾಣೆಗೆ ನಾನು ಹೋಗಿ, ನನ್ನ ಕಾರನ್ನು ಗುರುತಿಸಿರುತ್ತೇನೆ. ನನ್ನ ಕಾರಿನ ನಂಬರ್ ಪ್ಲೇಟನ್ನು ಕೆಎ-51-ಎನ್-1122 ಎಂದು ಬದಲಾಯಿಸಿದ್ದರು. ನಂತರ  ನ್ಯಾಯಾಲಯದ ಆದೇಶದ ಮೇರೆಗೆ ಭಟ್ಕಳ ಪೊಲೀಸ್ ಠಾಣೆಯಲ್ಲಿ ನಾನು ಕಾರನ್ನು ರಿಲೀಸ್ ಮಾಡಿಕೊಂಡಿರುತ್ತೇನೆ.

ದಿಃ 11-01-2018 ರಂದು ಕುಂದಾಪುರದ ಪೊಲೀಸ್ ಠಾಣೆಗೆ ನನ್ನ ಕಾರನ್ನು ತಂದು ಹಾಜರುಪಡಿಸಿದ್ದು ಪೊಲೀಸರು ಮಹಜರು ಮೂಲಕ ಅದನ್ನು ವಶಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದ್ರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಕುಂದಾಪುರದ ನ್ಯಾಯಾಲಯದ ಆದೇಶದ ಮೇರೆಗೆ ಕಾರನ್ನು ರಿಲೀಸ್ ಮಾಡಿಕೊಂಡಿರುತ್ತೇನೆ. ಸದ್ರಿ ಕಾರನ್ನು ನೋಡಿದರೆ ಗುರುತಿಸುತ್ತೇನೆ.  ಸಾಕ್ಷಿಯು ಭಾವಚಿತ್ರದಲ್ಲಿನ ತನ್ನ ಕಾರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಮತ್ತು ನ್ಯಾಯಾಲಯದಲ್ಲಿ  ಆರೋಪಿಗಳನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ  ಸಾಕ್ಷಿ ಗುರುತಿಸಿರುತ್ತಾರೆ. 2 ನೇ ಆರೋಪಿಯನ್ನು ವಿ.ಸಿ ಮೂಲಕ ಹಾಜರುಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2 ನೇ ಆರೋಪಿತರ ಪರ ಶ್ರೀ ಆರ್ ಕೆ ಎಂ ವಕೀಲರವರಿಂದಃ**

ಲಕ್ಷ್ಮೀಕಾಂತ್ ಮೋಟಾರ್ ನನ್ನ ಮಾವನಿಗೆ ಸೇರಿದ್ದಾಗಿರುತ್ತದೆ. ನಮ್ಮ ಕುಟುಂಬದವರ ಉದ್ಯೋಗ ಸಾರಿಗೆ ಸಂಸ್ಥೆಯಾಗಿರುತ್ತದೆ. ನನ್ನ ಮಾವ ಜೀವಿತಾವಧಿಯಲ್ಲಿ ಸಾರಿಗೆ ವಾಹನ ಇದ್ದು, ಈಗ ಇರುವುದಿಲ್ಲ. ವಾಹನದ ನೋಂದಣಿ ಮಾಲೀಕರು ಶೀನ ಶೆಟ್ಟಿ. ಆರ್ ಸಿ ನೋಂದಣಿ ಮಾಲೀಕರ ವಿಳಾಸ ಶಿರಿಯಾರ. ಖರೀದಿಸಿದ ಬಗ್ಗೆ ದಾಖಲೆ ಮಾಡಿಕೊಂಡಿರುವುದಿಲ್ಲ. ನಮೂನೆ  29 ಮತ್ತು 30 ನ್ನು ನೀಡಿದ್ದಲ್ಲಿ ತಕ್ಷಣ ಮಾಲೀಕತ್ವ

ಬದಲಾವಣೆಯಾಗುತ್ತದೆ ಎಂದರೆ ಸರಿ. ಯಾವ ದಿನಾಂಕ, ತಿಂಗಳಲ್ಲಿ ಖರೀದಿಸಿರುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಯಾವುದೇ ತಾಂತ್ರಿಕ ತೊಂದರೆ ಇರಲಿಲ್ಲ. ನ್ಯಾಯಾಲಯ ಶೀನ ಶೆಟ್ಟಿರವರಿಗೆ ವಾಹನವನ್ನು ಬಿಡುಗಡೆ ಮಾಡಿರುತ್ತದೆ.

ನಮ್ಮ ಮನೆ ಹಂಗಳೂರಿನಲ್ಲಿರುತ್ತದೆ. ಅದು ಬಾಡಿಗೆ ಮನೆಯಾಗಿರುತ್ತದೆ. ಘಟನೆ ನಡೆದ ಮನೆ ವಾಸ್ತವ್ಯದ ಮನೆಯಾಗಿದ್ದು, ರಾ.ಹೆದ್ದಾರಿಯ 66 ರ ಬದಿಯಲ್ಲಿರುತ್ತದೆ. ನಾನು ವಿವಾಹಿತನಾಗಿದ್ದು, ನನಗೆ ಇಬ್ಬರು ಮಕ್ಕಳು. ನಾನು ಬೆಳಿಗ್ಗೆ 5-30 ಬಾಗಲಕೋಟೆಗೆ ಹೋಗುವ ಸಮಯದಲ್ಲಿ ಕೊನೆಯ ಬಾರಿ ಕಾರನ್ನು ನೋಡಿರುತ್ತೇನೆ. ಕಳ್ಳತನವಾದ ಸಮಯದಲ್ಲಿ ನನ್ನ ಬಳಿ ಒಂದೇ ಕಾರಿತ್ತು. ನಾನು ನನ್ನ ಸ್ನೇಹಿತನ ಕಾರಿನಲ್ಲಿ ಹೋಗಿರುತ್ತೇನೆ. ನಾನು ಬೆಳಿಗ್ಗೆ 5-30 ಕ್ಕೆ ವಾಪಸ್ಸು ಬಂದಾಗ ಕಾರು ಇಲ್ಲ ಎಂದು ಗೊತ್ತಾಗಿರುತ್ತದೆ. ನಮ್ಮ ಮನೆಯಲ್ಲಿ ಸಿ.ಸಿ ಟಿವಿ ಮತ್ತು ನಾಯಿ ಇರುವುದಿಲ್ಲ. ನಮ್ಮ ಮನೆ ಮತ್ತು ಗೇಟ್ ಎರಡಕ್ಕೂ ಲಾಕ್ ಮಾಡಲಾಗಿತ್ತು. ಬೀಗ ಒಡೆದಿತ್ತು.

ಕಾರನ್ನು ಹೊರತುಪಡಿಸಿ ಬೇರೆ ವಸ್ತುಗಳು ಕಳ್ಳತನವಾಗಿಲ್ಲ. ಬೆರಳಚ್ಚು ತಜ್ಞರು ಬಂದಿದ್ದರು. ಕಾರಿಗೆ ಸಂಬಂಧಪಟ್ಟ ದಾಖಲೆಗಳು ಕಾರಿನಲ್ಲಿಯೇ ಇತ್ತು. ದಿಃ 25-12-2017 ಸುಮಾರು 1 ತಿಂಗಳ ನಂತರ ನನ್ನ ಕಾರನ್ನು ನೋಡಿರುತ್ತೇನೆ. ನನ್ನ ಕಾರು ಕಳೆದುಕೊಂಡ ನಂತರ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ಯಾರು ಕಳ್ಳತನ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಆರೋಪಿಗಳು ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ ಮತ್ತು ಮಹಜರು ಸಮಯದಲ್ಲಿ ಆರೋಪಿಗಳು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ಬೀಗ ಒಡೆಯಲು ಉಪಯೋಗಿಸಿದ ವಸ್ತುಗಳನ್ನು ತೋರಿಸಿರುವುದಿಲ್ಲ.

ಕಾರಿಗೂ ನನಗೂ ಸಂಬಂಧ ಇಲ್ಲ, ನಮ್ಮ ಮನೆಯಲ್ಲಿ ಇರಲಿಲ್ಲ, ನಾನು ಖರೀದಿಸಿಲ್ಲ, ನನ್ನ ಸ್ವಾಧೀನದಲ್ಲಿ ಇರಲಿಲ್ಲ, ನಾನು ಅದರ ಮಾಲೀಕನಲ್ಲ ಎಂದರೆ ಸರಿಯಲ್ಲ. ಕಾರಿಗೂ ನನಗೂ ಏನು ಸಂಬಂಧ ಎಂಬ ಬಗ್ಗೆ ಪೊಲೀಸರಿಗೆ ದಾಖಲಾತಿಯನ್ನು ಕೊಟ್ಟಿರುತ್ತೇನೆ. ಸದ್ರಿ ದಾಖಲೆಯನ್ನು ಈಗ ನ್ಯಾಯಾಲಯದಲ್ಲಿ ನೋಡಿರುವುದಿಲ್ಲ. ಸ್ಥಳದಲ್ಲಿ ಕಳ್ಳ ಯಾರು ಎಂದು ಗುರುತಿಸಲು ಕುರುಹುಗಳು ಸಿಕ್ಕಿರಲಿಲ್ಲ. ಆರೋಪಿಗಳ ಪೂರ್ವ ಪರಿಚಯವಿಲ್ಲ. ಕಾರಿನ ಲೈಟ್ ಮತ್ತು ಬಂಪರ್ ಹಾನಿಯಾಗಿತ್ತು. ಕಾರಿನ ದಾಖಲೆಗಳು ಸಿಕ್ಕಿರುತ್ತದೆ. ಮಹಜರನ್ನು ಠಾಣೆಯಲ್ಲಿ ತಯಾರು ಮಾಡಿದ್ದು ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರು ನಮ್ಮದಲ್ಲದ ಕಾರಣ ಶೀನ ಶೆಟ್ಟಿ ಬಿಡುಗಡೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಶೀನ ಶೆಟ್ಟಿ ಕಾರು ಬಿಡಿಸಿಕೊಂಡ ಬಗ್ಗೆ ನನಗೆ ಹೇಳಿರುತ್ತಾರೆ. ನ್ಯಾಯಾಲಯದಲ್ಲಿ ಶೀನ ಶೆಟ್ಟಿಯವರ ಸುರ್ಪದಿಗೆ ಕಾರನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ದೂರು ಕೊಡಲು ನನಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಪೊಲೀಸರು ನನಗೆ ತೋರಿಸಿಲ್ಲ, ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಭಟ್ಕಳ ಗ್ರಾಮಾಂತರ ಠಾಣೆಯಲ್ಲಿ ಸಿಗುವವರೆಗೂ ಕಾರು ಎಲ್ಲಿ ಇತ್ತು ಎಂದು ಪೊಲೀಸರು ಹೇಳಿಲ್ಲ

**1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**